

ಆಗಾಗ ನನ್ನೆದುರು ತಾಳೆಮರದ ಹಾಗೆ ಧುತ್ತಲೆ ನಿಂತುಬಿಡುವ ಪ್ರಶ್ನೆಗಳನ್ನೇನು ಮಾಡಲಿ?

ಪ್ರೇಮವು ತನ್ನನ್ನು ವಶೀಕರಣ ಮಾಡಿಕೊಂಡು ನಿರೀಕ್ಷೆಯೆಂಬ ನಿರ್ಜನ ಪರ್ವತದಲ್ಲಿ ತಂದು ನಿಲ್ಲಿಸುವ ಆ ಕಥೆಯ ನಾಯಕಿಯ ಹಾಗೆ ನಾನು ಯಾಕಾದರೂ ಆಗಬೇಕು? ರಾಮನ ಒಂದು ವನವಾಸವನ್ನು ಕೇಳಿದ್ದೇವೆ. ಹಾಂ, ಪ್ರೇಮದಲ್ಲಿ ವನವಾಸ... ವನವಾಸವಿದ್ದೇ ಇರುತ್ತದೆ. ನೀವು ಮಾತ್ರ ಯಥಾರ್ಥದಲ್ಲಿದ್ದರೂ ಇಲ್ಲದ ಹಾಗೆ ಇದ್ದೀರಿ. ನನಗೆ ಅನ್ನಿಸುತ್ತದೆ... ನಮ್ಮಿಬ್ಬರ ನಡುವೆ ನಮಗೆ ಗೋಚರಿಸದ ಹಾಗೆ ಯಾವುದೋ ಒಂದು ಅದೃಶ್ಯ ನದಿ ಹರಿಯುತ್ತಿರುವ ಹಾಗೆ... ನಾನು ನಿಮ್ಮೆಡೆಗೆ ಬರುವ ಪ್ರಯತ್ನ ಮಾಡುತ್ತೇನೆ. ಅದೆಲ್ಲಿಂದಲೋ ಆ ಅದೃಶ್ಯ ನದಿಯಲ್ಲಿ ಪ್ರವಾಹ ಬಂದುಬಿಡುತ್ತದೆ... ಅದರಲ್ಲಿ ನಾನು ಮುಳುಗಿ ಹೋಗುತ್ತಿದ್ದೇನೆ. ಮುಳುಗುತ್ತಲೇ ಸಹಾಯಕ್ಕಾಗಿ ನಿಮಗೆ ಮೊರೆಯಿಡುತ್ತಿದ್ದೇನೆ... ನೀವು ನನಗಾಗಿ ನಿಮ್ಮ ಸಹಾಯಹಸ್ತ ಚಾಚುತ್ತೀರಿ ನನ್ನನ್ನು ಮೇಲೆತ್ತಲು... ಆದರೆ ಅದ್ಹೇಗೋ ಅಲ್ಲಿಂದ ಅದೃಶ್ಯರಾಗಿ ಬಿಡುತ್ತೀರಿ ನನಗೆ ಗೋಚರಿಸದ ಹಾಗೆ...

ಈ ಪ್ರೇಮ ಇಷ್ಟೊಂದು ಯಾತನೆಯನ್ನು ಯಾಕಾದರೂ ನೀಡುತ್ತದೆ? ನಾನು ಪ್ರಶ್ನೆಯ ಸುಳಿಯಲ್ಲಿ ಸಿಲುಕಿಬಿಡುತ್ತೇನೆ. ಹಾಂ., ನನಗಿನ್ನೂ ನೆನಪಿದೆ... ಪ್ರೇಮ ದುಃಖಾಗ್ನಿಯಲ್ಲಿ ಬೆಂದಷ್ಟೂ ಆಳ ಹಾಗೂ ಪ್ರಗಾಢವಾಗುತ್ತದೆ ಎಂದು ನೀವು ಒಮ್ಮೆ ಹೇಳಿದ್ದೀರಿ. ನಾನು ಈ ಬೇಗೆಯಿಂದ ಮುಕ್ತಳಾಗಬಯಸುವುದಿಲ್ಲ, ಬದಲಾಗಿ ಇದನ್ನು ಹಾಗೆಯೇ ಬಚ್ಚಿಟ್ಟುಕೊಳ್ಳಬಯಸುತ್ತೇನೆ... ಈ ಬೇಗೆಯಲ್ಲಿಯೇ ಬೇಯುತ್ತಾ ನಿಮ್ಮನ್ನು ಪಡೆಯಲಿಚ್ಛಿಸುತ್ತೇನೆ.

ನನಗೆ ಈಗಲೂ ನೆನಪಿದೆ. ತಿಂಗಳುಗಳು ಕಳೆದರೂ ನಿಮ್ಮ ಕಡೆಯಿಂದ ಯಾವ ಸಂದೇಶವು ಇಲ್ಲದಾದಾಗ ಇದ್ದಕ್ಕಿದ್ದ ಹಾಗೆ ನೀವು ದಿಢೀರನೆ ನನ್ನ ಮುಂದೆ ಪ್ರತ್ಯಕ್ಷ ಆದಾಗ ನಾನು ಬಿಕ್ಕುತ್ತಲೇ ಕೇಳಿದ್ದೆ... ಇನ್ನು ಮುಂದೆ ಹೀಗೆ ನೀವು ನನ್ನನ್ನು ಬಿಟ್ಟು ಹೋಗುವುದಿಲ್ಲ ತಾನೇ...! ಕನಸಿನಲ್ಲಿಯೂ ಇನ್ನು ಹೀಗೆ ಮಾಡಬಾರದು... ನಾನು ಬದುಕಿರಲಾರೆ...

ಆಗ ನನ್ನ ಕಣ್ಣುಗಳು ತುಂಬಿ ಬಂದಿದ್ದವು. ನೀವಾಗ ನಿಮ್ಮ ಬೊಗಸೆಗಳಲ್ಲಿ ನನ್ನ ಮುಖ ತುಂಬಿಕೊಂಡು ಚುಂಬಿಸುತ್ತ ಹೇಳಿದ್ದೀರಿ... ನೋಡು, ನಿನ್ನ ಕಣ್ಣುಗಳಲ್ಲಿ ಅದೆಂಥದೋ ಜಾದು ಅಡಗಿದೆ. ನಾನು ಎಷ್ಟು ಪ್ರಯತ್ನಿಸಿದರೂ ಈ ಮಾಯೆಯ ಜಾಲದಿಂದ ಹೊರ ಹೋಗಲಾರೆ. ಏಕೆಂದರೆ ನಾನು ಕಣ್ಣು ಮುಚ್ಚಿದಾಗ ಕಾಡಿಗೆ ಹಚ್ಚಿದ ನಿನ್ನ ಕಣ್ಣುಗಳು ಹೊಳೆಯಲಾರಂಭಿಸುತ್ತವೆ. ನಾನು ಜೀವನದಲ್ಲಿ ಸಾಕಷ್ಟು ಕಳೆದುಕೊಂಡಿದ್ದೇನೆ. ಆದರೆ ಈಗ ಸುತಾರಾಂ ನಿನ್ನನ್ನು ಕಳೆದುಕೊಳ್ಳಲಾರೆ...